

ಸಂಭಾವಿತ ಅಳಿಯಂದಿರು ಇದ್ದಾರೆ. ಒಂದು ವೇಳೆ ಅಳಿಯದೇವರು ಶ್ರೀಮಂತನಾಗಿದ್ದರೆ ಅಥವಾ ನೌಕರಿಯಲ್ಲಿದ್ದರೆ ಮುಗಿಯಿತು, ಅವನು ಕೇಳಿದಷ್ಟು ಕೊಡಲೇಬೇಕು. ಮಾವನಿಗೆ ಅಷ್ಟು ಕೊಡುವ ಶಕ್ತಿ ಇದೆಯೊ, ಇಲ್ಲವೊ ಎನ್ನುವುದೆಲ್ಲ ಇಲ್ಲಿ ಗೌಣ. 'ಇಂಥ ಅಳಿಯದೇವರಿಗೆ ಮರ್ಯಾದೆ ಮಾಡುವ ಯೋಗ್ಯತೆ ಮಾವನಿಗೆ ಬೇಕಲ್ಲ!' ಎನ್ನುವ ಹೀಯಾಳಿಕೆ ಬೇರೆ. 'ಮಾವ ಕೊಡಲಾರ ಅಳಿಯ ಬಿಡಲಾರ'. ಎರಡೂ ಕಡೆಯ ಹಿರಿಯರು ಚರ್ಚಿಸಿ ಒಂದು ಒಪ್ಪಂದಕ್ಕೆ ಬರುತ್ತಾರೆ, ಅಷ್ಟು ಕೊಡಲೇ ಬೇಕು.

ಒಂದು ಶುಭ ದಿನದಂದು ಅಳಿಯನ ಸವಾರಿ ಮಾವನ ಊರಕಡೆಗೆ. ಮಾವನೂರಲ್ಲಿ ಮಾವನ ಕಡೆಯವರು ಹಾರ, ತುರಾಯಿ, ಆರತಿ ಬಾಜಾಬಜಂತ್ರಿಗಳೊಂದಿಗೆ ಅಗಸಿಯಲ್ಲಿ ಸೇರಿ 'ಅಳಿಯ ಬರುವನೆಂದು, ತನ್ನ ಪಾದಪೂಜೆಗೊಳುವನೆಂದು' ಕಾಯುತ್ತಾ ಇರುತ್ತಾರೆ. ಅಳಿಯದೇವರ ಪಾದ